Teachingninja.in

Latest Govt Job updates

Private Job updates

Free Mock tests available

Visit - teachingninja.in

# Karnataka High Court Civil Judge

## Previous Year Paper

### Mains Translation Paper (Held On 15 July 2017)

Teachingninja.in

HIGH COURT OF KARNATAKA

CIVIL JUDGE MAIN EXAMINATION-2017

**TRANSLATION PAPER**

Date: 15.07.2017 Max Marks: 100
ದಿನಾಂಕ: 15ನೇ ಜುಲೈ 2017

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

## Part I
ಭಾಗ – 1

**1. Translate the following deposition to Kannada language :** **Marks:15**

ಪ್ರಶ್ನೆ 1: ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ:

**Examination in Chief By Sri.R.S.J. Advocate**:

Complainant is a Railway employee and hence he is known to me. I am a member of Chit business carried on by the complainant. There are 20 members in the said chit business. I have seen the wife of the complainant. But, I did not talk to her. I had not visited the house of the complainant. I have no house at Bengaluru. The complainant and his wife never visited my native place. I have not borrowed loan from the complainant. I have not availed the loan as stated in the complaint by the complainant. I do not know how the cheque came in possession of the complainant. The cheque might have been misused by the complainant when he used to come to our canteen. I am producing the pass book of Corporation Bank, Murugesh Palya Branch, it is marked as Ex.D1. As per Ex.D1, cheques bearing No. 547047, 547048 and 547049 were honoured on 12.07.2011, 11.02.2012 and 01.03.2012. Ex.P1 cheque was not issued for repayment of the loan to the accused. I have no liability towards

Teachingninja.in

the complainant. The chit transaction was also cleared by me. I have not received notice from the complainant. The signatures on cheque and postal acknowledgement do not belong to me. I can examine the other members of the chit business.

**Cross Examination by Sri.MPK Advocate for Complainant:**

My native place is Mudigere. I am running canteen since 2012. It is true to suggest that I have received the summons from the court which is now shown to me, it is marked as Ex.P11 and my signature on the same is Ex.P11(a). I do not know whether summons was served at my native address. The notice might have been issued to the address shown at Ex.P10 and P11. Witness volunteers that I have not received the said notice. Ex.P3 issued at my native address. It is false to suggest that Ex.P7 and P8 are acknowledgements for having served the notice. It is false to suggest that Ex.P7 and P8 bears my signature. I have bank account at Corporation Bank, Murgeshpalya Branch, Bengaluru. Ex.P1 cheque pertains to my account. It is false to suggest that I have issued Ex.P1 cheque. It is false to suggest that before issuing cheque No. 547047 to 547079, I have issued Ex.P1 cheque. I used to issue cheque by affixing the seal of my canteen. The cheque which is shown to me belongs to my current account which is marked as Ex.P12. The signature appearing on Ex.P12 is marked as Ex.P12 (a). It is false to suggest that prior to 17.10.2012, I borrowed Rs.34,000/- from the complainant. It is true to suggest that I have issued Ex.P12 in order to repay the above said amount of Rs.34,000/-. It is true to suggest that as Ex.P12 was not honoured, I have paid Rs.34,000/- in cash. It is true to suggest that Ex.P12 was

Teachingninja.in

returned as there was no sufficient fund. The said endorsement is marked as Ex.P12(b). It is false to suggest that signature appearing on Ex.P1 and P12 belongs to me. It is false to suggest that in order to escape from the liability, I am deposing falsely that Ex.P1 cheque does not bears my signature. When I received summons from this court, I came to know that Ex.P1 cheque was misused by the complainant. I instructed my advocate to initiate necessary legal action. I have not lodged any police complaint. I have not issued notice to the complainant for having misused Ex.P1 cheque. It is false to suggest that the Ex.P1 cheque was issued for repayment of Rs.2,00,000/- to the complainant.

**Re-examination: nil.**

(Computerized to my dictation in Open Court)

R.I.O & A.C.,
Sd/-
Judicial Magistrate First Class

**2. Translate the following document to Kannada language**
**Marks: 15**

ಪ್ರಶ್ನೆ 2: ಈ ಕೆಳಕಂಡ ದಾಖಲೆಯನ್ನು ಕನ್ನಡ ಭಾಷೆಗೆ ಅನುವಾದಿಸಿ:

This **DEED OF RELEASE** executed on this the 5th day of April 2016 by Ramraj S/o Gururaj, aged 45 years, residing at House No.51, 41/1, 2nd Main, 3rd Cross, Rajivnagar, K.M.Nagar, hereinafter referred to as the **RELEASOR** of the One Part;

**TO AND IN FAVOUR OF**

Somaraj S/o Gururaj, aged 42 years, residing at House No.70, 2nd Cross, Rajivnagar, K.M.Nagar, hereinafter referred to as the **RELEASEE** of the Other Part;

Teachingninja.in

The term **RELEASOR** and **RELEASEE** shall mean and include their heirs, executors, legal representatives and assigns.

**WHEREAS** the property measuring an extent of 3000 sq.ft and building thereon situated in Door No.170, Gangapalya, K.M.Nagar, was acquired by Gururaj, the father of the Releasor and the Releasee herein by sale deed dated 06/02/1985 from Smt. Shantamma W/o Ramappa and registered as Document No.1015 of 1984-85 of Book 1 on the file of the Sub Registrar of K.M.Nagar

**WHEREAS** the father of the Releasor and the Releasee died intestate on leaving behind the Releasor and Releasee as his class I legal heirs.

**WHEREAS** the property more fully described in the Schedule hereunder is one of indivisible and it has been agreed by the Releasor to release his undivided half right in the property in favour of the Releasee and the Releasee has also accepted for the same.

**NOW THIS DEED OF RELEASE WITNESSETH AS FOLLOWS;**

**THAT** the RELEASOR in consideration of receipt of a sum of Rs.5,00,000/- (Rupees Five Lakhs Only) from the **RELEASEE** herein has released and relinquished his undivided half right in the property more fully described in the Schedule hereunder in favour of the **RELEASEE** herein.

**THAT** the **RELEASOR** hereafter do not have any right, title and interest over the schedule mentioned property and the **RELEASEE** hereafter enjoy the same absolutely with full right, title and interest over the property more fully described in the schedule hereunder.

**THAT** the **RELEASOR** covenant and undertake to execute any further documents that may be necessary for assuring the title in favour of the

Teachingninja.in

**RELEASEE** herein in respect of the property more fully described in the schedule hereunder at the cost of the **RELEASEE**.

**SCHEDULE OF PROPERTY**

Residential House Property bearing No.170, Gangapalya, K.M.Nagar constructed in the site measuring 3000 sq.feet situated within the limits of Muddinagere Taluk.

In Witness Whereof the **RELEASOR** have set his hand and Signatures on the 5th day of April 2016.

Sd/-

**WITNESSES:** **RELEASOR**

1.

2.

**3. Translate the following Passage from a Judgment to Kannada language:**
ಪ್ರಶ್ನೆ 3: ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. **Marks: 20**

From the discussion made above, it is clear that an adoption under the Mitakshara law has the effect of transplanting the adopted boy from his natural family into the family of his adoptive father. He ceases to be a coparcener in the family of his birth from the time of adoption and becomes one with his adoptive family immediately. This is however not so with regard to the sons of the adoptee in existence before the adoption. His son born prior to adoption continues to be the grand son of his grand father and his right to partition in that branch is not in any way affected. I am of the considered view that even if the plaintiff's father was given in adoption after their birth, they would be entitled to a share in the property of the genitive family of their father. The substantial question of law framed as above is answered accordingly.

At this stage, learned Counsel for the appellants contends that even if it is assumed that the plaintiffs continue to be the members of genitive family, they

Teachingninja.in

do not become Class I heirs. It is true that under Section 8 of the Hindu Succession Act, a son of a pre-deceased son is entitled for a share in the property of his father. The said Section has no application to the facts of this case. Admittedly, the family of the plaintiffs and the defendants is a joint Hindu family. The plaintiffs are claiming a share in the joint Hindu family property of their grand father and this right is not extinguished when their natural father was given in adoption to some other family in the year 1951. The appeal is devoid of merits and it is accordingly dismissed. Draw the decree accordingly. No costs.

**4. <u>Translate the following deposition to English language :</u>** **Marks:15**

<u>ಪ್ರಶ್ನೆ 4: ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ.</u>

ದಿನಾಂಕ 28.4.2015 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ತಮಿಳುನಾಡು ರಾಜ್ಯದಲ್ಲಿ ಪೂಜಾ ಬ್ಯಾಂಕರ್ಸ್ ಹೆಸರಿನಲ್ಲಿ ಸುಮಾರು 10 ವರ್ಷಗಳಿಂದ ಗಿರವಿ ಅಂಗಡಿಯನ್ನು ನಡೆಸುತ್ತಿದ್ದೇನೆ. ದಿ: 24.04.2014 ರಂದು ನಾನು ಅಂಗಡಿಯಲ್ಲಿ ಇದ್ದಾಗ ಬನಶಂಕರಿ ಪೋಲಿಸರು ಆರೋಪಿ ನಾಗೇಂದ್ರ ಸಮೇತ ಬೆಳಗ್ಗೆ 11.00ರ ವೇಳೆಯಲ್ಲಿ ಬಂದು ಆರೋಪಿ ನಮ್ಮ ಅಂಗಡಿಯಲ್ಲಿ ಗಿರವಿ ಇಟ್ಟಿದ್ದ ಚಿನ್ನದ ಆಭರಣಗಳನ್ನು ಹಾಜರು ಪಡಿಸುವಂತೆ ಹೇಳಿದ ಕಾರಣ ಸದರಿ ಚಿನ್ನದ ಆಭರಣಗಳನ್ನು ನಾನು ಹಾಜರು ಪಡಿಸಿದ್ದು, ಇವುಗಳನ್ನು ನಿಪಿ-7ರಂತೆ ಅಮಾನತ್ತು ಮಹಜರ್ ಮೂಲಕ ವಶಕ್ಕೆ ಪಡೆದಿದ್ದಾರೆ. ನಿಪಿ-7ಎ ನನ್ನ ಸಹಿ ಇದೆ.

ನೆಕ್ಲೇಸ್, ಚೈನು, 1 ಜೊತೆ ಓಲೆ ಮತ್ತು 2 ಉಂಗುರಗಳನ್ನು ಹಾಜರು ಪಡಿಸಿದ್ದೇನೆ. ಸದರಿ ವಸ್ತುಗಳನ್ನು ಆರೋಪಿ ನಮ್ಮ ಅಂಗಡಿಯಲ್ಲಿ ಗಿರವಿ ಇಟ್ಟಿದ್ದನು. ನಾನು ಗಿರವಿಗೆ ಇಟ್ಟುಕೊಳ್ಳುವಾಗ ಕಳ್ಳತನ ಮಾಡಿದ ವಸ್ತುಗಳು ಎಂದು ಗೊತ್ತಿರಲಿಲ್ಲ. ನಿಪಿ-4 ಮತ್ತು 5 ಪೋಟೋದಲ್ಲಿ ಕಾಣಿಸಿದ 8 ಐಟಮ್‌ಗಳನ್ನು ಕೊಟ್ಟಿದ್ದೇನೆ. ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. (ಈ ಬಗ್ಗೆ ಆರೋಪಿ ಪರ ವಕೀಲರಿಂದ ಆಕ್ಷೇಪಣೆ ಇಲ್ಲ.)

Teachingninja.in

(ಈ ವೇಳೆಗೆ ಹಿರಿಯ ಎ ಪಿ ಪಿ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ.)

**ಪಾಟೀ ಸವಾಲು: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :**

ದಿ : 03.04.2014 ರಂದು ಆರೋಪಿಯನ್ನು ಬನಶಂಕರಿ ಪೋಲಿಸರು ಕರೆದುಕೊಂಡು ನಮ್ಮ ಅಂಗಡಿಗೆ ಬಂದಿದ್ದರು ಎಂದರೆ ಸರಿ. ನಿಪಿ–7 ರಲ್ಲಿ ಕಾಣಿಸಿದಂತೆ ಮತ್ತು ಈಗ ಓದಿ ಹೇಳಿದಂತೆ 1 ರಿಂದ 8 ಐಟಮ್‌ಗಳನ್ನು ನಾನು ಪೋಲಿಸರ ವಶಕ್ಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಟಿ.ಎನ್.ಎಂ ವಕೀಲರಿಂದ:**

ಆಭರಣಗಳನ್ನು ಗಿರವಿ ಇಟ್ಟುಕೊಳ್ಳುವಾಗ ಸಾಮಾನ್ಯವಾಗಿ ರಶೀದಿಯನ್ನು ಕೊಡಲಾಗುತ್ತದೆ ಎಂದರೆ ಸರಿ. ಆರೋಪಿ ಆಭರಣಗಳನ್ನು ಗಿರವಿ ಇಟ್ಟ ಬಗ್ಗೆ ಪೋಲಿಸರಿಗೆ ದಾಖಲೆ ಕೊಟ್ಟಿಲ್ಲ. ಪೋಲಿಸರ ವಶಕ್ಕೆ ನೀಡಿದ ಆಭರಣಗಳ ಪ್ರತ್ಯೇಕ ವಿವರ ಹೇಳಲು ಬರುವುದಿಲ್ಲ. ನಾನು ಬನಶಂಕರಿ ಠಾಣೆಗೆ ಹೋಗಿಲ್ಲ. ನಿಪಿ–7 ರಲ್ಲಿ ನನ್ನ ಜೊತೆ ಬಾಬು ಸಹಿ ಮಾಡಿದ್ದಾರೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ–7 ರ ಅಂಶಗಳನ್ನು ನಾನು ಓದಿಲ್ಲ. ನಾನು ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ. ಆರೋಪಿಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆ ಮೇರೆಗೆ ಆರೋಪಿಯನ್ನು ನೋಡಿದ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಒಡವೆಗಳನ್ನು ಪೋಲಿಸರ ವಶಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ

2ನೇ ಅಧಿಕ ಜೆ. ಎಂ. ಎಫ್. ಸಿ.

Teachingninja.in

**5. Translate the following document to English language:** **Marks: 15**

**ಪ್ರಶ್ನೆ 5: ಈ ಕೆಳಕಂಡ ದಾಖಲೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ:**

ಸನ್ ಸಾವಿರದ ವಂಭೈನೂರ ಎಪ್ಪತ್ತೊಂದನೆ ಇಸವಿ ನವೆಂಬರ್ ಮಾಹೆ 11 ನೇ ತಾರೀಖಿನಲ್ಲಿ ಬೆಂಗಳೂರು ಜಿಲ್ಲೆ, ಆನೇಕಲ್ ಟೌನ್‌ನಲ್ಲಿರುವ ಜಿರಾಯಿತು ಕಸುಬಿನ ಮುನಿಶಾಮಪ್ಪನವರ ಮಗ ಸುಮಾರು 50 ವರ್ಷ ವಯಸ್ಸಿನ ಚಿಕ್ಕರಾಮಪ್ಪನು ಇದೇ ಬೆಂಗಳೂರು ಜಿಲ್ಲೆ ಆನೇಕಲ್ ಟೌನ್‌ನಲ್ಲಿರುವ ಜಿರಾಯಿತು ಕಸುಬಿನ ದೊಡ್ಡ ನಾರಾಯಣಪ್ಪನ ಮಗ ಸುಮಾರು 40 ವರ್ಷ ವಯಸ್ಸಿನ ರಾಜಣ್ಣನಿಗೆ ಬರೆದುಕೊಟ್ಟ ಶುದ್ಧ ಕ್ರಯ ಪತ್ರ.

ಚಿಕ್ಕರಾಯಪ್ಪನಾದ ನನಗೆ ಷೆಡ್ಯೂಲು ಜಮೀನುಗಳು ಪಿತ್ರಾರ್ಜಿತವಾಗಿ ಬಂದಿದ್ದಾಗಿರುತ್ತದೆ. ಈ ಷೆಡ್ಯೂಲು ಸ್ವತ್ತುಗಳನ್ನು ನನ್ನ ತಾತ ಚಿಕ್ಕತಿಮ್ಮಪ್ಪನವರು ಇದೇ ಅತ್ತಿಬೆಲೆ ಗ್ರಾಮದ ರಾಮಯ್ಯನ ಮಗ ಗಂಗಯ್ಯನಿಂದ 14–08–1941 ರ ರಿಜಿಸ್ಟರ್ ಕ್ರಯ ಪತ್ರದ ಮೂಲಕ ಪಡೆದುಕೊಂಡು, ಆ ಲಾಗಾಯ್ತು ಸ್ವಾಧೀನಾನುಭವ ಹೊಂದಿ, ಆನಂತರ ನನ್ನ ಮೃತ ತಂದೆ ಮತ್ತು ನಾನು ಷೆಡ್ಯೂಲು ಸ್ವತ್ತನ್ನು ಅನುಭವಿಸಿಕೊಂಡು ಬರುತ್ತಿದ್ದು, ನನ್ನ ತಂದೆಯ ಮರಣಾನಂತರ ನಾನೇ ಏಕೈಕ ವಾರಸುದಾರನಾಗಿ ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿಕೊಂಡು, ಈ ಕ್ರಯ ಪತ್ರ ಬರೆದುಕೊಡಲೂ ಪೂರ್ಣ ಹಕ್ಕುಳ್ಳವನಾಗಿರುತ್ತೇನೆ. ನನ್ನ ದರದು ನಿಮಿತ್ತ ಅಂದರೆ ನಾನು ಬೆಂಗಳೂರು ನಗರದಲ್ಲಿ ಒಂದು ಮನೆಯನ್ನು ಕೊಳ್ಳುವ ಸಲುವಾಗಿ ಈ ಷೆಡ್ಯೂಲು ಸ್ವತ್ತನ್ನು ಒಂದು ಲಕ್ಷದ ಎಂಬತ್ತೈದು ಸಾವಿರ ರೂಪಾಯಿಗಳಿಗೆ ಕ್ರಯ ಮಾಡಿಕೊಡಲು 10–4–1971 ನೇ ಮರ್ಕುಂ ಒಪ್ಪಂದ ಮಾಡಿಕೊಟ್ಟಿದ್ದು, ಆ ಸಮಯದಲ್ಲಿ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ನಿಮ್ಮಿಂದ ಮುಂಗಡ ಹಣವನ್ನು ಪಡೆದುಕೊಂಡಿದ್ದು, ಉಳಿಕೆ ಕ್ರಯದ ಮೊಬಲಗನ್ನು ಸಬ್ ರಿಜಿಸ್ಟ್ರಾರ್‌ರವರ ಸಮಕ್ಷಮ ಪಡೆದುಕೊಳ್ಳುತ್ತೇನೆಯಾದ್ದರಿಂದ ಈ ರೀತಿಯಾಗಿ ಕ್ರಯದ ಪ್ರತಿಫಲ ಪೂರ್ಣವಾಗಿ ಸಂದಾಯವಾಗಿರುತ್ತೆ. ಷೆಡ್ಯೂಲು ಸ್ವತ್ತು ನನ್ನ ಸ್ವಾಧೀನಾನುಭವದಲ್ಲಿದ್ದು ಈ ದಿನ ಈ ಪತ್ರದ ಸಾಕ್ಷಿಗಳ ಸಮಕ್ಷಮ ನಿಮ್ಮ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತೇನೆ. ಈ ಲಾಗಾಯ್ತು ಷೆಡ್ಯೂಲು ಸ್ವತ್ತಿಗೆ ನೀವೇ ಸಂಪೂರ್ಣ ಮಾಲೀಕರಾಗಿ ಪುತ್ರ ಪೌತ್ರ ಪಾರಂಪರ್ಯ ಅನುಭವಿಸಿಕೊಂಡು ಹೋಗತಕ್ಕದ್ದು. ಈ ಸ್ವತ್ತಿನ ಮೇಲೆ ಯಾವ ವಿಧವಾದ ಆಧಾರ, ಭೋಗ್ಯ, ಜೀವನಾಂಶದ ಹಕ್ಕು ಇರುವುದಿಲ್ಲಾ ಮತ್ತು ಹಾಗೇನಾದರೂ ಯಾರಾದರೂ ಅಂತಹ ಹಕ್ಕು ಪ್ರತಿಪಾದಿಸಿದರೆ ಅದನ್ನು ನನ್ನ ಸ್ವಂತ ಖರ್ಚಿನಿಂದ ನಿವಾರಣೆ ಮಾಡಿಕೊಡುತ್ತೇನೆ ಮತ್ತು ನಿಮಗೆ ಉಂಟಾಗುವ ನಷ್ಟವನ್ನು ಸಹ ನಾನು ತುಂಬಿಕೊಡುತ್ತೇನೆಂದು ಬರೆದುಕೊಟ್ಟ ಶುದ್ಧ ಕ್ರಯ ಪತ್ರ.

Teachingninja.in

**6. Translate the following passage from a judgment to English language:**
**ಪ್ರಶ್ನೆ 6: ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **Marks:20**

ಕ್ಲೇಮುದಾರರು ಮೃತನ-ಪತ್ನಿ ಮತ್ತು ಇಬ್ಬರು ಪುತ್ರಿಯರಾಗಿದ್ದು ಅಪಘಾತದ ಸಮಯದಲ್ಲಿ ಮಕ್ಕಳು ಅನುಕ್ರಮವಾಗಿ ಎಂಟು ವರ್ಷ ಮತ್ತು ಎರಡು ವರ್ಷ ವಯಸ್ಸಿನವರಾಗಿದ್ದಾರೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಮೃತನು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ಪದವೀಧರನಾಗಿದ್ದು, ಅವನು ಒಬ್ಬ ವ್ಯವಹಾರಸ್ಥ ಹಾಗೂ ಕೃಷಿಕನೂ ಆಗಿದ್ದನೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಆದರೆ, ಕ್ಲೇಮುದಾರರು ಅವನು ಯಾವ ರೀತಿಯ ವ್ಯವಹಾರ ನಡೆಸುತ್ತಿದ್ದ ಎಂಬುದನ್ನು ಸೂಚಿಸಲು ಅದರ ಸಮರ್ಥನೆಗಾಗಿ ಯಾವುದೇ ವಿಶ್ವಾಸಾರ್ಹ ದಸ್ತಾವೇಜೀಯ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ. ಅವನು 38 ವರ್ಷದವನಾಗಿದ್ದನೆಂದು ಹೇಳಲಾಗಿದೆ. ವಿಮಾಕರ್ತನ ಪರ ಹಾಜರಾದ ಮಾನ್ಯ ವಕೀಲರಿಂದ ಸರಿಯಾಗಿ ಸೂಚಿಸಲಾಗಿರುವಂತೆ ಯಾವುದೇ ವಿಶ್ವಾಸಾರ್ಹ ಮತ್ತು ಮನದಟ್ಟು ಮಾಡುವ ದಸ್ತಾವೇಜೀಯ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಮೃತನ ಮಾಸಿಕ ಆದಾಯವು 15,000/- ರೂ.ಎಂದು ನಿರ್ಧರಣೆ ಮಾಡುವಲ್ಲಿ ನ್ಯಾಯಾಧಿಕರಣವು ಸಮರ್ಥನೀಯವಾಗಿಲ್ಲ. ಅಪಘಾತವು 2006ರ ವರ್ಷದಲ್ಲಿ ನಡೆದಿದೆ. ಆದುದರಿಂದ, ವಯಸ್ಸು, ಉದ್ಯೋಗ ಮತ್ತು ಅಪಘಾತದ ವರ್ಷವನ್ನು ಸಹ ಪರಿಗಣಿಸಿ, ನ್ಯಾಯೋದ್ದೇಶಗಳನ್ನು ಪೂರೈಸಲು, ಮೃತನ ಮಾಸಿಕ ಆದಾಯವು 10,000/- ರೂ.ಗಳೆಂದು ಮರು ನಿರ್ಧರಣೆ ಮಾಡಿರುತ್ತೇವೆ. ಇದರಿಂದ, ಕ್ಲೇಮುದಾರರು ಮೂವರಾಗಿರುವುದರಿಂದ ಮೃತನ ವೈಯಕ್ತಿಕ ಹಾಗೂ ಜೀವನ ನಿರ್ವಹಣಾ ವೆಚ್ಚಕ್ಕಾಗಿ 1/3ನೇ ಭಾಗವನ್ನು ಕಳೆಯಬೇಕಾಗುತ್ತದೆ. ತದನುಸಾರವಾಗಿ ಅವನ ವೈಯಕ್ತಿಕ ಹಾಗೂ ಜೀವನ ನಿರ್ವಹಣಾ ವೆಚ್ಚಗಳಿಗಾಗಿ 1/3ನೇ ಭಾಗವನ್ನು (ಅಂದರೆ, 3,333/- ರೂ.ಗಳನ್ನು) 10,000/- ರೂ.ಗಳಿಂದ ಕಳೆಯಲಾಗಿದ್ದು, ನಿವ್ವಳ ಆದಾಯವು ಮಾಸಿಕ 6,667/- ರೂ.ಗಳಾಗಿದೆ.

ಅಷ್ಟೇ ಅಲ್ಲದೆ, ಮೃತನು 38 ವರ್ಷಗಳ ವ್ಯಕ್ತಿಯಾಗಿದ್ದು, ಅದು 36 ರಿಂದ 40 ವರೆಗಿನ ವಯೋ ಗುಂಪಿನಲ್ಲಿ ಬರುವುದರಿಂದ, ನ್ಯಾಯಾಧಿಕರಣದಿಂದ ಸರಿಯಾಗಿ ಅಂಗೀಕರಿಸಲಾದಂತೆ ಅದಕ್ಕೆ ಅನ್ವಯಿಸುವ ಸೂಕ್ತ ಗುಣಕವು 15 ಆಗಿದೆ. ತದನುಸಾರವಾಗಿ, ಸರಳವರ್ಮರವರ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ, 15ರ ಗುಣಕವನ್ನು ನಾವು ಅಂಗೀಕರಿಸುತ್ತೇವೆ. ಹೀಗಾಗಿ, ಅವಲಂಬನೆಯನ್ನು ಕಳೆದುಕೊಂಡಿದ್ದಕ್ಕಾಗಿ ನಷ್ಟ ಪರಿಹಾರವು ನ್ಯಾಯಾಧಿಕರಣವು ವಿಧಿಸಿದ 18,00,000/- ಕ್ಕೆ ಪ್ರತಿಯಾಗಿ 12,00,060/- (ಅಂದರೆ 6,667 x 12 x '15') ಎಂದಾಗುತ್ತದೆ.

********

Teachingninja.in